Unauthorised Exploitation of Government Forest Land in Agani Kyamanahalli and other villages

398. Sri H. B. JWALANAIAH (Hassan).—

Will the Minister of State for Forests be pleased to state :—

(*a*) whether it has come to the notice of the Government that an area of more than 200 acres of Government Forest has been unauthorisedly exploited in Agani Kyamanahalli, Malayagadde and Kadamane Villages in Sakalespur Taluk ;

(*b*) whether the Government has received any complaints by the villagers of this area in that behalf ;

(*c*) if so, the action taken in this matter ?

Sri ALUR HANUMANTHAPPA (Minister of State for Forests).—

(*a*) No.

(*b*) Yes.

(*c*) The matter is under investigation.

ಶ್ರೀ ಎಚ್. ಬಿ. ಜ್ವಾಲನಯ್ಯ.—ನನ್ನ ಪ್ರಶ್ನೆಯ (ಎ) ಭಾಗಕ್ಕೆ ಇಲ್ಲ ಎಂದು ಹೇಳಿ (ಬಿ) ಭಾಗಕ್ಕೆ ಹೌದು ಎಂದು ಹೇಳಿದ್ದಾರೆ. ಹಾಗಾದರೆ ಗ್ರಾಮಾಂತರ ಪ್ರದೇಶದ ಜನರು ಕೊಟ್ಟ ದೂರು ಸರ್ಕಾರದ ಗಮನಕ್ಕೆ ಬಂದಮೇಲೆ, ಅನಧಿಕೃತವಾಗಿ ಅರಣ್ಯವನ್ನು ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಮೊದಲನೆ ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಯಾವುದು ಸರಿ ?

† ಶ್ರೀ ಆಲೂರು ಹನುಮಂತಪ್ಪ.—ಮೊದಲನೇ ಪ್ರಶ್ನೆಗೆ ಉತ್ತರ 200 ಎಕರೆ ಅನಧಿಕೃತವಾಗಿ ಅರಣ್ಯವನ್ನು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ ಇಲ್ಲ ಎಂದು ಹೇಳಿದ್ದೇವೆ. (ಬಿ) ಪ್ರಶ್ನೆಗೆ ಉತ್ತರವಾಗಿ ಅರ್ಜಿ ಬಂದಿದೆ ಎಂದು ಹೇಳಿದ್ದೇನೆ. ಅದರ ಬಗ್ಗೆ ತನಿಖೆ ಮಾಡುತ್ತಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸುಮಾರು ಮೂರು ವರ್ಷದಿಂದಲೂ 200 ಎಕರೆ ಕಾಡಿನಲ್ಲಿ ನಡು ಹಗಲನಲ್ಲೇ ಮರ ಕಡಿದುಕೊಂಡು ಹೋಗುತ್ತಿರುವುದು ಸ್ಥಳೀಯ ಪತ್ರಿಕೆಗಳಲ್ಲಿ ಕೂಡ ಬಂದಿರುವುದಲ್ಲದೆ ತಮಗೂ ಮತ್ತು ಮುಖ್ಯ ಮಂತ್ರಿಯವರಿಗೂ ಮತ್ತು ಸಂಬಂಧಪಟ್ಟ ಅಧಿಕಾರ ವರ್ಗದವರಿಗೂ ಈ ಗ್ರಾಮಗಳಲ್ಲಿರುವ ಜನ ನೂರಾರು ಅರ್ಜಿಗಳನ್ನು ಕೊಟ್ಟಿದ್ದರೂ ಕೂಡ ಇಲ್ಲಿಯವರೆಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ತನಿಖೆ ನಡೆಸುವುದಕ್ಕೆ ಎಷ್ಟು ದಿವಸ ಬೇಕು, ವಿಜಿಲೆನ್ಸ್ ಕಮಿಷನ್ನಿಗೆ ಕಳಿಸಿಕೊಡುವುದಕ್ಕೆ ಸಿದ್ಧವಾಗಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಸ್ಥಳದ ಕೆಲವು ಮುಖಂಡರ ಸಹಾಯ ಪಡೆದು ಕೆಲವು ಮರಗಳನ್ನು ಕಡಿದು ಇದ್ದಿರಾಗಿ ಮಾಡಿ ಕಳ್ಳ ಸಾಗಾಣಿಕೆ ನಡೆಯುತ್ತಿದೆ ಎನ್ನುವ ದೂರು ಬಂದಿದೆ ಆದರೆ ಅವರ ಸ್ವಂತ ಹಿಡುವಳಿ ಜಮೀನಿನಲ್ಲಿ ಮಾಡುತ್ತಿದ್ದಾರೆಯೋ ಅಥವಾ ಕಾಡಿನಲ್ಲಿ ಮರವನ್ನು ಕಡಿದು ತೆಗೆದುಕೊಂಡು ಬಂದು ಮಾಡುತ್ತಿದ್ದಾರೆಯೋ ಎನ್ನುವ ಪ್ರಶ್ನೆ ಬರುತ್ತದೆ. ಸರ್ವೆ ಇಲಾಖೆ ಮತ್ತು ಪಿರ್ಯಾದಿದಾರಿಗಳಿಗೆ ಅರ್ಜಿಯನ್ನು ಕಳುಹಿಸಿಕೊಟ್ಟು, ಖಾಸಗಿ ಜಮೀನಿಗೂ, ಅರಣ್ಯ ಜಮೀನಿಗೂ ಬೌಫರ್ಕೇಟ್ ಮಾಡುವ ಸರ್ವೆ ಕೆಲಸ ತ್ವರಿತವಾಗಿ ಆಗಬೇಕೆಂದು ಕೇಳಿದ್ದೇವೆ. ತ್ವರಿತವಾಗಿ ಸರ್ವೆ ಕೆಲಸ ನಡೆಯುತ್ತಿದೆ.

ಶ್ರೀ ಬಿ. ನಂಜಪ್ಪ.—ಹಾಸನ ಜಿಲ್ಲೆಯಲ್ಲಿ ಅರಣ್ಯಾಧಿಕಾರಿಗಳು ಅರಣ್ಯ ಪ್ರದೇಶದ ಜಮೀನನ್ನು ಏಕ್‌ಸಾಲ್ ಗುತ್ತಿಗೆಗೆ ಕೊಟ್ಟು, ವನೊರ್ಮೂಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಧಿಕಾರಿಗಳಿಗೆ ಆ ರೀತಿ ಜಿಮ್ಮೀನು ಕೊಡುವ ಅಧಿಕಾರ ಏಲ್ಲ, ಅಂಥವು ಸರ್ಕಾರಕ್ಕೆ ಬರಬೇಕು. ಹಿಂದೆ ಒಂದು ವೇಳೆ ಕೊಟ್ಟಿದ್ದರೆ ಏಕ್‌ಸಾರ್ ಬೇಸಿಸ್ ಮೇರೆ ಕೆಲವು ಜಿಲ್ಲೆಗಳಲ್ಲಿ ಸರ್ಕಾರದ ವತಿಯಿಂದ ಮಾತ್ರ ಕೊಟ್ಟಿದೆ, ಅಧಿಕಾರಿಗಳು ಆ ರೀತಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಕಡೆ ಅನಧಿಕೃತವಾಗಿ ಒತ್ತುವರಿಯಾಗಿರಬಹುದು. ರೆವೆನ್ಯೂ ಮಂತ್ರಿಗಳು ಮತ್ತು ನಾವು ಎಲ್ಲರೂ ಸೇರಿ ಇಂಥದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎನ್. ಜಿ. ಹಾಲಪ್ಪ.—ಅರ್ಜಿ ಸರ್ಕಾರಕ್ಕೆ ಬಂದ ತರೀಖಿನ್ನು ತಿಳಿಸುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—5-6-1968ರಲ್ಲಿ ಒಬ್ಬರಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಬಂದಿದೆ. ಈಚೆಗೆ ಎಂದರೆ ಏಪ್ರಿಲ್, ಮೇ ತಿಂಗಳಿನಲ್ಲಿ ಸರ್ಕಾರಕ್ಕೆ ಅರ್ಜಿ ಬಂದಿದೆ. ಅವುಗಳ ಬಗ್ಗೆ ಅಸಿಸ್ಟೆಂಟ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಮತ್ತು ಸರ್ವೆ ಇಲಾಖೆಯವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಎಚ್. ಬಿ. ಚ್ಯಾಲನಯ್ಯ.—ಸರಕಾರಿ ಕಾಡನ್ನು ಕಡಿದು ಇದ್ದಲು ತಯಾರಿಸುತ್ತಿರುವ ಬಗ್ಗೆ ಸಾಕ್ಷಿ, ಪುರಾವೆ ಒದಗಿಸಿದರೆ ವಿಜಿಲೆನ್ಸ್ ಕಮಿಷನ್ನಿಗೆ ತನಿಖೆಗೆ ಕಳಿಸುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿಗೆ ಕಳುಹಿಸಬೇಕಾಗಿಲ್ಲ. ಇಲಾಖೆಯಿಂದ ಸರ್ವೆ ಮಾಡಿಸಿ ಅನ್‌ಅಥರೈಜ್ಡ್ ಕಲ್ಟಿವೇಷನ್ ಇದ್ದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಈಗಿರುವ ಕಾನೂನಿನ ಪ್ರಕಾರ ಇಂಥ ಕೇಸುಗಳನ್ನು ಬುಕ್ ಮಾಡುವುದಕ್ಕೆ ಮತ್ತು ಎವಿಕ್ಟ್ ಮಾಡುವುದಕ್ಕೆ ಅರಣ್ಯ ಇಲಾಖೆಗೆ ಮತ್ತು ರೆವೆನ್ಯೂ ಇಲಾಖೆಗೆ ಅಧಿಕಾರವಿದೆ. ಈ ಬಗ್ಗೆ ರೆವಿನ್ಯೂ ಸಚಿವರು ಒಂದು ಕಾನೂನನ್ನು ತರುವುದಾಲ್ಲದ್ದಾರೆ, ಅರಣ್ಯದಲ್ಲಿ ಎಲ್ಲಾದರೂ ಎನ್‌ಕ್ರೋಚ್ ಆಗಿರುವುದು ಕಂಡುಬಂದರೆ ತಿಳಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಬಿ. ಆರ್. ಧನಂಜಯ.—ಫಾರೆಸ್ಟ್ ಇಲಾಖೆಯಿಂದ ಹರಿಜನರಿಗೆ ಕೊಟ್ಟಿರುವ ಜಮೀನನ್ನು ಅವರು ಮಾರಿಕೊಂಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಮ್ಯಾಚ್ ಫ್ಯಾಕ್ಟರಿಗೆ ಪ್ರತಿ ವರ್ಷ ಸಾಫ್ಟ್ ವುಡ್ ಸಾಗಿಸಲು ಅವಕಾಶ ಕೊಟ್ಟಿರುವುದರಿಂದ ಆ ನೆವದಲ್ಲಿ ಬೇರೆ ಒಳ್ಳೆಯ ಮರಗಳನ್ನು ಕೂಡ ಕಡಿದು ಸಾಗಿಸುವುದು ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಮ್ಯಾಚ್ ಫ್ಯಾಕ್ಟರಿಯವರಿಗೆ ಅವಕಾಶ ಕೊಡದಂತೆ ಕಾನೂನು ಮಾಡುವಿರಾ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳಿದ್ದಾರೆ ಮತ್ತು ಸ್ಕ್ವಾಡ್ ಇದೆ, ಅವರು ನೋಡುತ್ತಾರೆ. ಒಂದು ವೇಳೆ ಅಂಥ ಸರ್ಚ್ ಮಾನ ಸದಸ್ಯರಿಗೆ ಅಥವಾ ಇತರರಿಗೆ ತಿಳಿದರೆ ಅದನ್ನು ತಿಳಿಸಿದರೆ ಉಗ್ರ ಕ್ರಮ ಕೈಕೊಳ್ಳುತ್ತೇವೆ.

Mr. SPEAKER.—Question Hour is over.

SHORT NOTICE QUESTION AND ANSWER

Increasing the Seats in Agricultural Colleges in the State

42. Sri H. SIDDAVEERAPPA (Harihar).—
Sri N. G. HALAPPA (Channagiri).—
Sri G DUGGAPPA (Bharamasagara).—

Will the Minister for Agriculture be pleased to state :—

(*a*) the total number of applications received for admission in the Agricultural Colleges in the State :

(*b*) the number of seats available for admission in the colleges for the First Year B.Sc. (Agri) :